ಕರ್ನಾಟಕ ಸರ್ಕಾರ

ಸಂ:ಆಇ 732 ವೆಚ್ಚ-12/2023

ಕರ್ನಾಟಕ ಸರ್ಕಾರದ ಸಚಿವಾಲಯ
ವಿಧಾನ ಸೌಧ
ಬೆಂಗಳೂರು, ದಿನಾಂಕ:27.11.2023

**ಸುತ್ತೋಲೆ**

ವಿಷಯ : ರೂ.50.00 ಲಕ್ಷ ಮೌಲ್ಯ ಮೀರದ ಟೆಂಡರುಗಳಲ್ಲಿಯೂ ಸಹ ದ್ವಿ ಲಕೋಟೆ ಪದ್ಧತಿಯನ್ನು ಮತ್ತು ಕಾಮಗಾರಿ ಟೆಂಡರುಗಳಲ್ಲಿ ಜಿ.ಎಸ್.ಟಿ ಅಳವಡಿಕೆಯನ್ನು ಅನುಸರಿಸುವ ಕುರಿತು.

*****

ಇ-ಪ್ರೋಕ್ಯೂರ್‌ಮೆಂಟ್ 2.0 ಅಡಿಯ KPPP ತಂತ್ರಾಂಶದಲ್ಲಿ ರೂ.50.00 ಲಕ್ಷಕಿಂತ ಕಡಿಮೆ ಅಂದಾಜಿನ ಟೆಂಡರ್‌ಗಳನ್ನು Single cover Tender ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದಾಗ L-1 ಗುತ್ತಿಗೆದಾರರನ್ನು ನಿರ್ಧರಿಸುವಾಗ ಮತ್ತು ಕಾಮಗಾರಿ ಟೆಂಡರುಗಳಲ್ಲಿ GST ಯನ್ನು ಪರಿಗಣಿಸುವ ಬಗ್ಗೆ ಕೆಲವೊಂದು ಸಂಗ್ರಹಣಾ ಪ್ರಾಧಿಕಾರಗಳಿಂದ ಸರ್ಕಾರದ ಗಮನ ಸೆಳೆಯಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ, ಪ್ರಸ್ತಾಪಿತ ವಿಷಯದ ಕುರಿತು ಪರಿಶೀಲಿಸಿ ಈ ಕೆಳಗಿನಂತೆ ಸ್ಪಷ್ಟೀಕರಣ ನೀಡಲಾಗಿದೆ;

i. KTPP ನಿಯಮ 28(1)ರಂತೆ ರೂ.50.00 ಲಕ್ಷ ಮೀರಿದ ಟೆಂಡರುಗಳಲ್ಲಿ two -cover tender system ಅನ್ನು ಅನುಸರಿಸುವುದು ಕಡ್ಡಾಯವಾಗಿದ್ದು, ರೂ.50.00 ಲಕ್ಷಕ್ಕಿಂತ ಕಡಿಮೆ ಮೊತ್ತದ ಟೆಂಡರುಗಳಲ್ಲಿ two-cover tender system ಪಾಲಿಸುವುದಕ್ಕೆ ಯಾವುದೇ ನಿರ್ಬಂಧವಿರುವುದಿಲ್ಲ. ಆದ್ದರಿಂದ ರೂ.50.00 ಲಕ್ಷ ಮೌಲ್ಯ ಮೀರದ ಟೆಂಡರುಗಳಲ್ಲಿಯೂ ಸಹ ಟೆಂಡರ್ ಆಹ್ವಾನಿಸುವ ಪ್ರಾಧಿಕಾರಗಳು ಇಚ್ಛಿಸಿದಲ್ಲಿ ದ್ವಿ ಲಕೋಟೆ ಪದ್ಧತಿಯನ್ನು ಅನುಸರಿಸಬಹುದಾಗಿರುತ್ತದೆ.

ii. KTPP ನಿಯಮ 25(1) ರಲ್ಲಿ " Out of the tenders found to be substantially responsive after the initial examination the tenderer who has bid the lowest evaluated price in accordance with the evaluation criteria or tenderer scoring the highest on the evaluation criteria specified as the case may be shall de determined " ಎಂದು ತಿಳಿಸಿರುವುದರಿಂದ ತಾಂತ್ರಿಕವಾಗಿ ಅರ್ಹರಾದ ಟೆಂಡರುದಾರಲ್ಲಿ L1 ಟೆಂಡರುದಾರರನ್ನು ಆಯ್ಕೆ ಮಾಡಬೇಕಾಗುತ್ತದೆ. ಆದ್ದರಿಂದ ಟೆಂಡರ್ ಆಹ್ವಾನಿಸುವ ಪ್ರಾಧಿಕಾರಗಳು ಏಕ ಲಕೋಟೆ ಪದ್ಧತಿಯನ್ನು ಅನುಸರಿಸಲು ಆಯ್ಕೆಮಾಡಿಕೊಂಡ ಪ್ರಕರಣಗಳಲ್ಲಿ ತಾಂತ್ರಿಕ ದಾಖಲೆಗಳನ್ನು ಪರಿಶೀಲಿಸಿ ಟೆಂಡರ್ ಆಹ್ವಾನಿಸುವ / ಅಂಗೀಕರಿಸುವ ಪ್ರಾಧಿಕಾರಗಳು ಟೆಂಡರ್‌ದಾರರ ಅರ್ಹತೆಯನ್ನು ಮೌಲ್ಯಮಾಪನ ಮಾಡಿದ ನಂತರ ಅರ್ಹರಾದ ಟೆಂಡರುದಾರರಲ್ಲಿ L1 ಟೆಂಡರ್‌ದಾರರನ್ನು ಮಾತ್ರ ಆಯ್ಕೆ ಮಾಡಿ ಪ್ರಕಟಣೆಗೆ KPPP (e-Portal) ನಲ್ಲಿ ಅಗತ್ಯ ವ್ಯವಸ್ಥೆಯನ್ನು DPAR (e-Gov) ರವರಿಂದ ಮಾಡಲು ಕ್ರಮವಹಿಸುವುದು.

iii. UniSR ಅನುಸರಿಸಿ ತಯಾರಿಸುವ ಅಂದಾಜುಗಳಲ್ಲಿ GST ಯನ್ನು ಪ್ರತ್ಯೇಕವಾಗಿ ತೋರಿಸಲು ಸರ್ಕಾರದ ನಿರ್ದೇಶನಗಳಲ್ಲಿ ತಿಳಿಸಲಾಗಿರುತ್ತದೆ. ಆದ್ದರಿಂದ ಸಂಗ್ರಹಣಾ ಪ್ರಾಧಿಕಾರಗಳು ಅಂದಾಜನ್ನು UniSR ನಲ್ಲಿ ತಯಾರಿಸಿ ಅದಕ್ಕೆ ನಿಗದಿತ ಮೊತ್ತದ GSTಯನ್ನು ಪ್ರತ್ಯೇಕವಾಗಿ ಸೇರಿಸಿ ಒಟ್ಟಾರೆ ಮೊತ್ತವನ್ನು ನಿಗದಿಪಡಿಸಿ KPPP ನಲ್ಲಿ ಟೆಂಡರ ಕರೆಯಬೇಕಾಗುತ್ತದೆ. ಆದ್ದರಿಂದ KPPP ನಲ್ಲಿ ಈ ಕೆಳಗಿನಂತೆ ಅಳವಡಿಸಲು ತಂತ್ರಾಂಶ ಮಾರ್ಪಾಡು ಮಾಡಲು DPAR (e-Gov) ಕ್ರಮವಹಿಸುವುದು:

(a) ಟೆಂಡರ್ ಆಹ್ವಾನಿಸುವ ಪ್ರಾಧಿಕಾರಗಳು UniSR ಆಧಾರದ ಮೇಲೆ ತಯಾರಿಸಿದ ಅಂದಾಜನ್ನು KPPP ನಲ್ಲಿ ಅಳವಡಿಸಿದ ನಂತರ ಪ್ರತ್ಯೇಕವಾಗಿ ನಿಗದಿತ ಶೇಕಡಾವಾರು GST ಮೊತ್ತವನ್ನು ಸ್ವಯಂಚಾಲಿತವಾಗಿ ತಂತ್ರಾಂಶದಲ್ಲಿಯೇ ಲೆಕ್ಕ ಹಾಕಿ ತೋರಿಸಿ ಒಟ್ಟಾರೆ ಅಂದಾಜು ಮೊತ್ತಕ್ಕೆ ಟೆಂಡರ್ ಆಹ್ವಾನಿಸಲು ಅನುವು ಮಾಡಿಕೊಡುವುದು.

(b) ತದನಂತರ ಟೆಂಡರುದಾರರು ದರಗಳನ್ನು ನಮೂದಿಸಿದ ನಂತರ ಪ್ರತ್ಯೇಕವಾಗಿ ನಿಗದಿತ ಶೇಕಡಾವಾರು GST ಮೊತ್ತವನ್ನು ತಂತ್ರಾಂಶದಲ್ಲಿಯೇ ಸ್ವಯಂಚಾಲಿತವಾಗಿ ಲೆಕ್ಕ ಹಾಕಿ ತೋರಿಸಿ ಒಟ್ಟಾರೆ ಟೆಂಡರ್ ಮೊತ್ತವನ್ನು ತೋರಿಸಲು ಅನುವು ಮಾಡಿಕೊಡುವುದು.

(c) ಈ ರೀತಿ ನಿಗದಿತ GST ಮೊತ್ತವನ್ನು ತಂತ್ರಾಂಶದಲ್ಲಿಯೇ ಅಳವಡಿಸಲು ಹಾಗೂ ಟೆಂಡರ್ ಆಹ್ವಾನಿಸುವ ಪ್ರಾಧಿಕಾರಕ್ಕೆ ಮತ್ತು ಗುತ್ತಿಗೆದಾರರಿಗೆ ಇದನ್ನು ಬದಲಾವಣೆ ಮಾಡಲು ಅವಕಾಶವಿರದಂತೆ ಕ್ರಮವಹಿಸಲು ಹಾಗೂ ಈ ರೀತಿ ಅಳವಡಿಸಲಾದ ಅಂದಾಜು ದರ (GST ಒಳಗೊಂಡಂತೆ) ಮತ್ತು ಗುತಿಗೆದಾರರು ನೀಡಿದ ದರಗಳ (GST ಒಳಗೊಂಡಂತೆ) ಮೊತ್ತವನ್ನು ಮೌಲ್ಯ ಮಾಪನ ಮಾಡಿ KTPP ನಿಯಮಗಳ ಅನ್ವಯ L1 ಟೆಂಡರ್‌ದಾರರನ್ನು ಆಯ್ಕೆ ಮಾಡಲು ಅಗತ್ಯ ವ್ಯವಸ್ಥೆಯನ್ನು KPPP ನಲ್ಲಿ ಅಳವಡಿಸುವುದು.

ಮೇಲಿನ ಸೂಚನೆಗಳನ್ನು ಸರ್ಕಾರದ ಎಲ್ಲಾ ಇಲಾಖೆಗಳು ಹಾಗೂ ತಮ್ಮ ಅಧೀನದಲ್ಲಿ ಕಾರ್ಯನಿರ್ವಹಿಸುವ ನಿಗಮ, ಮಂಡಳಿಗಳು ಮತ್ತು ಸ್ವಾಯತ್ತ ಸಂಸ್ಥೆಗಳು ಕಟ್ಟುನಿಟ್ಟಾಗಿ ಪಾಲಿಸುವುದನ್ನು ಎಲ್ಲಾ ಸಂಗ್ರಹಣಾ ಪ್ರಾಧಿಕಾರಗಳು ಖಚಿತಪಡಿಸಿಕೊಳ್ಳತಕ್ಕದ್ದು.

(ಡಾ:ಪಿ.ಸಿ.ಜಾಫರ್)
ಸರ್ಕಾರದ ಕಾರ್ಯದರ್ಶಿ
(ಆಯವ್ಯಯ ಮತ್ತು ಸಂಪನ್ಮೂಲ)
ಆರ್ಥಿಕ ಇಲಾಖೆ

ಇವರಿಗೆ:

(1) ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು.
(2) ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು.
(3) ಸರ್ಕಾರದ ಎಲ್ಲಾ ಕಾರ್ಯದರ್ಶಿಗಳು.